ದಿಃ 08-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಎದುರುದಾರ ಪರ ವಕೀಲರಿಂದಃ

ನಾನು ಪ್ರಸ್ತುತ ಬಸಳಿಗುಂದಿಯಲ್ಲಿ ವಾಸವಿರುತ್ತೇನೆ. ನಾನು ಮನೆಯಲ್ಲಿ ಒಬ್ಬಳೆ ವಾಸವಿರುತ್ತೆನೆ. ಲಕ್ಷ್ಮಿ ಬ್ಯಾಂಕನಲ್ಲಿ ರೂ 2 ಲಕ್ಷ ಸಾಲವನ್ನು, ರತ್ನಾಕರ ಬ್ಯಾಂಕನಲ್ಲಿ ರೂ 1 ಲಕ್ಷ ಸಾಲವನ್ನು, ಇನ್ನೂಂದು ಹಣಕಾಸಿನ ಸಂಘದಲ್ಲಿ ರೂ 2ಲಕ್ಷ, ಮತ್ತು ಅವರಿವರಿಂದ 5-6ಲಕ್ಷ ರೂಪಾಯಿ ಸಾಲವನ್ನು ಪಡೆದಿರತ್ತೇನೆ. ಸದರಿ ಸಾಲಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಸಾಲಗಳನ್ನು ನಾನು ಇನ್ನು ಮರುಪಾವತಿ ಮಾಡಿರುವುದಿಲ್ಲ. ನಾನು ಇಂದು ನ್ಯಾಯಾಲಾಯಕ್ಕೆ ಒಬ್ಬಳೆ ಬಂದಿರುತ್ತೇನೆ. ನಾನು ಆರೋಗ್ಯವಂತಳಾಗಿರುತ್ತೇನೆ ಎಂದರೆ ಸರಿ. ನಾನು ವಾಸವಿರುವ

ಮನೆ ನನ್ನ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಬಸಳಿಗುಂದಿ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಆರ್ ಸಿಸಿ ಮನೆ ಇರುತ್ತದೆ ಎಂದರೆ ಸರಿಯಲ್ಲ. ಎದುರುದಾರನ ಹೆಸರಿನಲ್ಲಿ 6 ಎಕರೆ ಜಮೀನು ಇರುವುದನ್ನು ಮತ್ತು ಅದು ನೀರಾವರಿ ಜಮೀನು ಆಗಿರುವುದು ಇರುವುದನ್ನು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಯಾವ ದಾಖಲೆ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಎದುರುದಾರ ಬಡ್ಡಿ ವ್ಯವಹಾರ ಮಾಡಲು ಪರವಾಣಿಗೆಯನ್ನು ಹೊಂದಿರುತ್ತಾನೆ ಮತ್ತು ಲಕ್ಷಾನುಗಟ್ಟಲೆ ಬಡ್ಡಿ ವ್ಯವಹಾರ ಮಾಡುವ ವಿಷಯ ನನಗೆ ಗೋತ್ತಿದೆ.

2. ನಾನು ಅಶೋಕ ಗಾರ್ಡನ ಹೊಟೇಲನಲ್ಲಿ 5-6 ವರ್ಷದಿಂದ ಕೆಲಸ ಮಾಡುತ್ತಿದ್ದು ಈಗ ಆನಾರೋಗ್ಯವಾಗಿರುವ ಕಾರಣ ಬಿಟ್ಟಿರುತ್ತೇನೆ. ನನ್ನ ಅನಾರೋಗ್ಯಕ್ಕೆ ಸಂಬಂದಿಸಿದ ದಾಖಲೆಗಳಿದ್ದು, ಹಾಜರುಪಡಿಸುತ್ತೇನೆ. ಸದರಿ ದಾಖಲೆಗಳನ್ನು ಈ ಮೇದಲೇ ಹಾಜುರು ಪಡಿಸಲು ತೊಂದರೆ ಇತ್ತು. ನನ್ನ ಮಗಳು ಅವಳ ಪತಿಯ ಮನೆಯಲ್ಲಿ ಆರಾಮವಾಗಿರುತ್ತಾಳೆ ಎಂದರೆ ಸರಿ. ನಾನು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿದ ನಂತರ, ಮಾನ್ಯ ಪ್ರಧಾನ ದಿವಾಣಿ ನ್ಯಾಯಾಲಯದಲ್ಲಿ ಓಎಸ್ ನಂ.481/2023 ದಾವೆಯನ್ನು ಜಿವನಾಂಶಕ್ಕಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಈ ಮೂದಲು ಓಎಸ್ ನಂ. 560/2009 ಮತ್ತು ಕ್ರಿ ಮಿ. ನಂ.356/2009 ರಲ್ಲಿ 1ಲಕ್ಷ 10 ಸಾವಿರ ರೂಪಾಯಿ ಎದುರುದಾರನಿಂದ ಹಣ ಪಡೇದು, ಇನ್ನು ಮುಂದೆ ಜೀವನಾಂಶ ಕೇಳುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ ಆದರೆ ಸದರಿ 1

ಲಕ್ಷ 10 ಸಾವಿರ ರೂಪಾಯಿಗಳನ್ನು ಪಡೆದಿರುವುದು ನಿಜ ಇರುತ್ತದೆ. ನಾನ ಸದರಿ ವಿಷಯವನ್ನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಾಗಲೇ ಜೀವನಾಂಶ ಪಡೆದಿದ್ದರೂ ಸಹ, ಎದುರುದಾರನಿಗೆ ತೋಂದರೆ ಕೂಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.